೮) ಅರಕಲಗೂಡು ರಾಮನಾಥಪುರವನ್ನು ಪ್ರವಾಸಿ ಕೇಂದ್ರ ವನ್ನಾಗಿ ಅಭಿವೃದ್ಧಿಪಡಿಸುವುದು

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು).— ಮಾನ್ಯ ಅಧ್ಯಕ್ಷರೇ, ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಪುರಾಣಪ್ರಸಿದ್ಧವಾದ ಸ್ಥಳವಾಗಿದ್ದು ಅದನ್ನು ದಕ್ಷಿಣಕಾಶಿ ಎಂದೂ ಕರೆಯಲಾಗುತ್ತಿದೆ. ೧೯೯೦ನೇ ಇಸವಿಯನ್ನು ಪ್ರವಾಸಿಗರ ವರ್ಷವೆಂದು ಹೆಸರಿಸಲಾಗಿದ್ದು ಸದರಿ ರಾಮನಾಥಪುರವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಮಾಡಿಸುವ ಅವಶ್ಯಕತೆ ಇದ್ದು ಈ ಬಗ್ಗೆ ಸರಕಾರದವರು ಆಲ್ಲಿಗೆ ಬರತಕ್ಕ ಪ್ರವಾಸಿಗಳಿಗೆ ಅವಶ್ಯಕವಾದ ಸೌಕರ್ಯಗಳನ್ನು ಕಲ್ಪಿಸುವ ಸಲುವಾಗಿ ಈ ವರ್ಷದ ಆಯವ್ಯಯದಲ್ಲಿ ಸೂಕ್ತವಾದಷ್ಟು ಹಣವನ್ನು ಒದಗಿಸುವ ಮೂಲಕ ರಾಮನಾಥಪುರವನ್ನು ಅಭಿವೃದ್ಧಿಗೊಳಿಸಬೇಕೆಂದು ಸರಕಾರವನ್ನು ವಿನಂತಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗ ಉತ್ತರವನ್ನು ಕೊಡಲಿಕ್ಕೆ ನನ್ನಲ್ಲಿ ವಿವರ ಇಲ್ಲ. ನಾಳೆ ಕೊಡುತ್ತೇನೆ.

೯) ಉದ್ಯೋಗದ ಸಲುವಾಗಿ ಡಿ ಮತ್ತು ಇ ಗುಂಪಿನ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ ಆದಾಯದ ಮಿತಿಯನ್ನು ಹೆಚ್ಚಿಸುವುದು

ಶ್ರೀ ಬಿ. ಸ್ವಾಮಿರಾವ್ (ಹೊಸಪೇಟೆ).— ಮಾನ್ಯ ಅಧ್ಯಕ್ಷರೇ, ಉದ್ಯೋಗದ ಸಲುವಾಗಿ ಡಿ ಮತ್ತು ಇ ಗ್ರೂಪ್‌ನ ಆರ್ಥಿಕವಾಗಿ ಹಿಂದುಳಿದ ಅಭ್ಯರ್ಥಿಗಳಿಗೆ, ಸರಕಾರವು ಈಗ ನಿಗದಿ ಮಾಡಿರುವ ಆದಾಯದ ಮಿತಿಯೆಷ್ಟು? ಈ ಆದಾಯದ ಮಿತಿಯು ಕಡಿಮೆಯಾಗಿದ್ದು, ಇದನ್ನು ಹೆಚ್ಚಿಸುವ ಬಗ್ಗೆ ಸರಕಾರವು ಆಲೋಚಿಸುತ್ತಿದೆಯೇ? ಹಾಗಿದ್ದಲ್ಲಿ ಎಂದಿನಿಂದ ಹೆಚ್ಚಿಸಲಾಗುವುದು ಹಾಗೂ ಎಷ್ಟಕ್ಕೆ ಹೆಚ್ಚಿಸಲಾಗುವುದು ಎಂಬ ಬಗ್ಗೆ ವಿವರಣೆ ನೀಡಬೇಕೆಂದು ಸರಕಾರವನ್ನು ಕೋರುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಇದರ ವಿವರ ಸಧ ನನ ಲ್ಲಿ ಇಲ್ಲ. ನನಗೆ ಗೊತ್ತಿರುವ ಹಾಗೆ ಬಿ.ಸಿ.ಡಿ. ಗ್ರೂಪ್‌ನವರಿಗೆ ಹತ್ತು ಸಾವಿರ ರೂಪಾಯಿ ಮಿತಿ ಇದ್ದಂತೆ ಕಾಣುತ್ತದೆ. ಈ ಮಿತಿಯನ್ನು ಹೆಚ್ಚು ಮಾಡಬೇಕು. ಆದರೆ ಎಷ್ಟು ಹೆಚ್ಚು ಮಾಡಬೇಕು ಎನ್ನುವಂಥ ಈ ಪ್ರಶ್ನೆ ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್ ವರದಿ ಬಂದ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬಹುದೇ ಹೊರತಾಗಿ ಈಗ ಏನೂ ಹೇಳುವುದಕ್ಕಾಗುವುದಿಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ಕಮೀಷನ್‌ನ ವರದಿ ಇಷ್ಟರಲ್ಲಿಯೇ ಬರುವ ನಿರೀಕ್ಷೆ ಇದೆ. ಆದಕ್ಕಾಗಿ ಆ ವರದಿಯಲ್ಲಿ ಅವರೇನಾದರೂ ಶಿಫಾರಸ್ಸು ಮಾಡಿರುತ್ತಾರೆಯೇ ಎನ್ನುವಂಥದ್ದನ್ನು ಕೂಡಾ ವಿಚಾರ ಮಾಡಬೇಕಾಗುತ್ತದೆ ಆ ವರದಿ ಬಂದ ಮೇಲೆ ಆದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ಈಗ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಮುಂದಿನ ವಿಷಯಕ್ಕೆ ಹೋಗುವುದಕ್ಕೆ ಮೊದಲು ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಏನೆಂದರೆ, ಶಿಖಿಳ ನಿಯಮದ ಪ್ರಕಾರ ಯಾವ ಯಾವ ಸದಸ್ಯರು ಸೀಮಿತವಾದ ಪ್ರಶ್ನೆಗಳನ್ನು ಕೇಳುತ್ತಾರೋ ಅವು ರಾಜ್ಯ ವ್ಯಾಪ್ತಿಯಾಗಿ ಪರಿಣಾಮ ಬೀರತಕ್ಕಂಥದ್ದು. ಇವುಗಳಿಗೆ ಮಂತ್ರಿಗಳು ಉತ್ತರವನ್ನು ಕೊಟ್ಟಮೇಲೆ ನಾವು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲ ಎಂದು ನೀವು ಹೇಳಿ ಬಿಟ್ಟರೆ ಇದು ಹಾಗೆಯೇ ಸದನದ ಕಡತಕ್ಕೆ ಹೋಗಿಬಿಡುತ್ತದೆ. ಉದಾಹರಣೆಗೆ ಮಾನ್ಯ ಸದಸ್ಯರಾದ ಗುರುದೇವ್‌ರವರು ಶಿಖಿಳರ ನಿಯಮದಲ್ಲಿ ಹಾಸನ ಜಿಲ್ಲೆಯ ಬಗ್ಗೆ ಮಾತ್ರ ಕೇಳಿಲ್ಲ. ಅವರು ಒಟ್ಟಾರೆ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿಯ ಬಗ್ಗೆ ತಿದ್ದುಪಡಿ ತರತಕ್ಕ ರೀತಿ ವಿಚಾರದಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಹಾಸನ ಜಿಲ್ಲೆಗೆ ಸೀಮಿತವಾಗಿ ಅವರು ಹೇಳಬೇಕೇ ಹೊರತು ಇಲ್ಲಿ ಪೊಲೀಸ್ ಮ್ಯಾಟರ್ ಬಗ್ಗೆ ಕೇಳಿದರೆ ಹೇಗೆ ? ಶಿಖಿಳ ಕ್ಕೆ ಏನೋ ತಿದ್ದುಪಡಿ ತರುತ್ತೇವೆ, ಎಂಬ ಉತ್ತರವನ್ನು ಹೇಳಿ